**ಸ್ವಲ್ಪ ಹೊತ್ತಿಗೆ ಮಗ್ಗಲು ಬದಲಿಸಲೂ ಆಗದಂತೆ ನನ್ನನ್ನು ಗಟ್ಟಿಯಾಗಿ ಕಟ್ಟಿಹಾಕಿದಂತೆ ಅನ್ನಿಸಿತು. ಉಸಿರಾಟ ಕಷ್ಟವಾಯಿತು. ಕಣ್ಬಿಟ್ಟರೆ ಎಷ್ಟೋ ದಿನಗಳಿಂದ ಕಿವಿಯ ಬಳಿ ಬಂದು ಹೂಂಗುಟ್ಟುತ್ತಿದ್ದ ಬೂದು ಪಾರಿವಾಳ ಇಂದು ಗಟ್ಟಿಯಾಗಿ ನನ್ನ ಭುಜಕ್ಕೇ ಕಾಲೂರಿ ನಿಂತಿತ್ತು! ಅದರ ಕಣ್ಣುಗಳಲ್ಲಿ ಸಮುದ್ರವೊಂದು ಕ್ಷಣ ಇಂಗುತ್ತಿತ್ತು, ಕ್ಷಣ ಉಕ್ಕುತ್ತಿತ್ತು.**

ಅರಗಿಸಿಕೊಳ್ಳುವಷ್ಟು ತ್ರಾಣವಿರಲಿಲ್ಲ. ಅಲ್ಲೊಂದು ಕಡೆ ನಿಂತುಬಿಟ್ಟೆ. ಬಿಸೀ ಗಾಳಿ ರೊಂಯ್ಗುಡುತ್ತಿತ್ತು. ಮುಖಮೈ ಉರಿಯುತ್ತಿತ್ತು.

ದೂರದಲ್ಲಿ ದನ ಮೇಯಿಸಿಕೊಂಡು ಓಡಾಡಿಕೊಂಡಿದ್ದ ಹುಡುಗನೊಬ್ಬ ಜೋರಾಗಿ ಸೀಟೀ ಹೊಡೆದ. ಅದಕ್ಕೆ ಪ್ರತಿಯಾಗಿ ಕುರಿಕಾಯುವವನೊಬ್ಬ ಕಿವಿ ಸೀಳುವಂತೆ ಸೀಟೀ ಹೊಡೆದ. ಪರಸ್ಪರ ಸೀಟೀಯಲ್ಲೇ ಅವರಿಬ್ಬರೂ ನಮ್ಮ ಬಗ್ಗೆ ಏನೋ ಸಂಭಾಷಿಸುತ್ತಿರುವ ವಾಸನೆ ಬಡಿಯಿತು. ಸ್ವಲ್ಪಹೊತ್ತಿಗೆ ಅವರ ಆಕೃತಿಗಳು ನಮ್ಮತ್ತಲೇ ನಡೆದು ಬರುತ್ತಿರುವುದು ಕಂಡು ಕಾಲು ಥರಗುಟ್ಟಿದವು. ಬಾ ಓಡೋಣ ಎಂದು ಶಾಕಾಂಬರಿ ಕೈ ಜಗ್ಗಿದಳು. ಅದೆಲ್ಲಿತ್ತೋ ಶಕ್ತಿ ಅಂತೂ ಅವಳೊಂದಿಗೆ ಓಡಿದೆ. ಧಾವಂತಕ್ಕೆ, ಧಗೆಗೆ ಅಂಗೈಗಳು ಬೆವರಾಡಿ ಜಾರುತ್ತಿದ್ದರೂ ಒಬ್ಬರಿಗೊಬ್ಬರು ಬಿಗಿಗೊಳಿಸಿಕೊಳ್ಳುತ್ತ ಮಡ್ಡೀಓಣಿ ಬರುವ ತನಕ ಹಿಂದಿರುಗದೆ ಓಡಿದೆವು. ಬಯಲು ಹರಿದು ಓಣಿಗಳು ತೆರೆದುಕೊಂಡು ಗುಡಿಸಲುಗಳು, ಶೀಟಿನ ಮನೆಗಳು ಕಾಣುತ್ತಿದ್ದಂತೆ ಜೀವ ಬಂದಂತಾಯಿತು. ಮೊರಕ್ಕೆ ಮೇಣ ಹಚ್ಚುತ್ತ, ಬಿದಿರನ್ನು ಸೀಳುತ್ತ, ಕಾಳು ಕೇರುತ್ತ, ಮಸಾಲೆ ಅರೆಯುತ್ತ, ಹೇನು ಹೆಕ್ಕುತ್ತ, ಪಾತ್ರೆ ತೊಳೆಯುತ್ತ, ಮಕ್ಕಳ ಕುಂಡಿ ತೊಳೆಯುತ್ತ, ಸೆಗಣಿ ಬಳಿಯುತ್ತ, ಬೀಡಿ ಸೇದುತ್ತ, ತಂಬಾಕು ತಿಕ್ಕುತ್ತ ಏನೇನೋ ಕೆಲಸಗಳನ್ನು ಮೈಗಂಟಿಸಿಕೊಂಡವರೆಲ್ಲ ನಮ್ಮನ್ನು ಮಿಕಿಮಿಕಿ ನೋಡುತ್ತಿದ್ದರು. ಆ ತನಕ ನನಗೆ ಧಾರವಾಡದಲ್ಲಿ ಹೀಗೊಂದು ಓಣಿಯಿದೆ ಎಂದೇ ಗೊತ್ತಿರಲಿಲ್ಲ. ಒಂದು ಮನೆಯ ಮುಂದಿದ್ದ ದೃಶ್ಯ ಇನ್ನೊಂದು ಮನೆಯ ಮುಂದೆ ಇರುತ್ತಿರಲಿಲ್ಲ. ಬ್ಯಾಂಡ್ಮಿಂಟನ್ ಆಟ ನೋಡಿದಂತೆ ಅತ್ತೊಮ್ಮೆ ಇತ್ತೊಮ್ಮೆ ನೋಡುತ್ತ ನಡೆದೇ ನಡೆದೆ. ಯಾರೋ ದೊಡ್ಡ ಕಲಾವಿದರು ಕ್ಯಾನ್ವಾಸ್ ಮೇಲೆ ಹಳ್ಳಿಯ ದೃಶ್ಯ ಬರೆದರೆ ಹೇಗಿರುತ್ತದಲ್ಲ ಥೇಟ್ ಹಾಗೇ ಇತ್ತು. ಹೇಗೋ ಒಟ್ಟಿನಲ್ಲಿ ಬೇಗ ಶಾಕಾಂಬರಿಯ ಮನೆ ತಲುಪಿದರೆ ಸಾಕೆಂಬ ಪರಿಸ್ಥಿತಿ ಉಂಟಾಗಿದ್ದರಿಂದ ಅವಳ ಬಗೆಗಿನ ಒಳ ಬೇಗುದಿಯೆಲ್ಲ ಸ್ವಲ್ಪ ಮರೆಯಾದ ಹಾಗಿತ್ತು.

ಮೂರು ರಸ್ತೆ ಕೂಡುವಲ್ಲಿ ಆಕಾಶ ನೀಲಿಯ ಗೇಟ್ ಕಂಡಿತು. ತೆರೆಯುತ್ತಿದ್ದಂತೆ ಪೇರುಗೊಂಚಲಗಳು ತಲೆಗೇ ತಾಕಿದವು. ಮೂಲೆಯಲ್ಲಿದ್ದ ಬಾಯ್ಲರ್ ಬಿಸಿಲಿನಲ್ಲಿ ಬಳಸುವವರಿಲ್ಲದೆ ಹಳೇ ಮುದುಕನಂತೆ ನಿಂತಿತ್ತು. ತಟ್ಟೆಯಲ್ಲಿದ್ದ ಒಣಗಿದ ಅನ್ನವನ್ನು ನಾಯಿಯೊಂದು ತಾತ್ಸಾರದಿಂದ ನೋಡುತ್ತ ಕುಳಿತಿತ್ತು. ಹೊಸಬರಿಗೆ ಒದರಬೇಕೆನ್ನುವುದು ಅದಕ್ಕೆ ಕಲಿಸಿರಲಿಲ್ಲವೋ ಅಥವಾ ಶಾಕಾಂಬರಿ ಜೊತೆಗಿದ್ದಿದ್ದಕ್ಕೆ ಸುಮ್ಮನಾಯಿತೋ. ಎದುರಿಗಿದ್ದ ದೊಡ್ಡ ಬಾಗಿಲಿನ ಕಡೆ ಹೊರಟೆ. ನಮ್ಮನೆ ಅದಲ್ಲ ಈಕಡೆ ಬಾ ಎಂದು ಕಾಂಪೌಂಡಿಗಂಟಿದ ಒಬ್ಬರೇ ಹಾಯ್ದು ಹೋಗುವಷ್ಟಿದ್ದ ಸಣ್ಣ ಸಂದಿಯಲ್ಲಿ ಕರೆದೊಯ್ದಳು. ಅವರಮ್ಮ ಬಾಗಿಲು ತೆಗೆಯುವ ತನಕ ಕೋಣೆಯ ಕಿಟಕಿಯೊಳಗಿಂದ